


### ಡೈವೋರ್ಸ್ ಕಾನೂನು ಮಾಹಿತಿ

ಸ್ತ್ರೀ ಸಬಲೀಕರಣದ ಕಾನೂನು ಬಂದಾಗಲೇ ಡೈವೋರ್ಸ್ ಹೆಚ್ಚುತ್ತಿರುವುದು ವಿಷಾದಕರ. ಈ ಕುರಿತ ಅಂಶಗಳನ್ನು ಸುಚೇತನಾ ನಾಯ್ಕ ಸರಳವಾಗಿ ವಿವರಿಸಿದ್ದಾರೆ.

ವಿಭಾ ಮುರಳೀಧರ್, ತುಮಕೂರು/ ಎಚ್.ಎಸ್. ವಿಶ್ವನಾಥ್, ಪಿ.ಗೋವಿಂದರಾಜ್, ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಮೊಳಕಾಲ್ಮುರು ಸುರೇಶ, ಬಳ್ಳಾರಿ/ ಡಾ.ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಮದುವೆಗೆ ಮೊದಲೆ!

ಮದುವೆಯಾದ ಮೇಲಿನ ವಿಚ್ಛೇದನವನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಈಗ ಮದುವೆಗೆ ಮೊದಲೆ ವಿಚ್ಛೇದನ: ಮುರಿದು ಬೀಳುವ ನಿಶ್ಚಿತಾರ್ಥ! (ಸಾನಿಯಾ ವಿಷಯ ಗೊತ್ತಲ್ಲ)

-ಸಿಪಿಕೆ, ಮೈಸೂರು

### ಹೃದಯ ತಟ್ಟಲಿಲ್ಲ!

ಡೈವೋರ್ಸ್ ಬಗ್ಗೆ ಸುದ್ದಿಯಾಗುವ ರೋಚಕ ಸಂಗತಿ ಹಾಗೂ ಅಂಕಿ ಅಂಶಗಳ ಬಗ್ಗೆ ಲೇಖಕರು ಪ್ರಸ್ತಾಪಿಸಿದ್ದಾರೆ, ನಿಜ. ಆದರೆ ಇಂತಹ ಸೂಕ್ಷ್ಮ ವಿಷಯಗಳನ್ನು ಹೃದಯ ತಟ್ಟುವಂತೆ ಹೇಳುವ ನೈಪುಣ್ಯತೆಯಾಗಲಿ ಅಥವಾ ಆಳವಾದ ಜೀವನ ಗ್ರಹಿಕೆಯಾಗಲಿ ಬರಹದಲ್ಲಿ ಕಾಣಲಿಲ್ಲ.

ಕೆ.ನೀಲಾ, ಎನ್.ಗಾಯತ್ರಿ, ವರಲಕ್ಷ್ಮಿ, ಬೆಂಗಳೂರು

### ಸೈಕಿಯಾಟ್ರಿಸ್ಟ್ ಸರಿ

'ಸುಧಾ' ಫೆ. 25ರ 'ನೀವು ಕೇಳಿದಿರಿ?' ವಿಭಾಗದಲ್ಲಿ, ಬಹುಮಾನಿತ ಪ್ರಶ್ನೆಗೆ ಉತ್ತರವಾಗಿ, 'ಹೃದಯದ ಮಾತನ್ನು ಕಾರ್ಡಿಯಾಲಜಿಸ್ಟ್ ಆಡುತ್ತಾನೆ, ಮನಸ್ಸಿನ ಮಾತನ್ನು ಸೈಕಾಲಜಿಸ್ಟ್ ಆಡುತ್ತಾನೆ' ಎಂದು ಉತ್ತರ ಕೊಟ್ಟಿದ್ದೀರಿ. ಸೈಕಾಲಜಿಸ್ಟ್ ಬದಲಾಗಿ 'ಸೈಕಿಯಾಟ್ರಿಸ್ಟ್' ಎಂಬ ಪದವನ್ನು ಬಳಸಬೇಕಾಗಿತ್ತು. ಸೈಕಾಲಜಿಸ್ಟ್ ಎಂದರೆ ಮನಶಾಸ್ತ್ರಜ್ಞ, ಸೈಕಿಯಾಟ್ರಿಸ್ಟ್ ಎಂದರೆ ಮನೋವೈದ್ಯ.

-ಎಸ್. ಪ್ರಕಾಶ, ದೇವನಹಳ್ಳಿ

### ಇನ್ನೂ ಇದ್ದಾವಲ್ಲಾ...

ಪಂಡಿತರ ಮನೆಯ ಪುನರುತ್ಥಾನ ಬಿ.ಎಂ.ಹನೀಫ್ ಲೇಖನ ಓದಿ ಆಶ್ಚರ್ಯವಾಯಿತು. ಇಂತಹ ಪುರಾತನ ಗೃಹಗಳು ನಮ್ಮಲ್ಲಿನ್ನೂ ಕಾಣಸಿಗುತ್ತಿರುವುದು ನಮ್ಮ ಸೌಭಾಗ್ಯವೇ ಸರಿ.

-ನೆ.ಲ.ರಾಂ., ಬೆಂಗಳೂರು

### ಸಂತಸ ತಂದ ಜಾತ್ರೆ

ಗದಗದಲ್ಲಿ ಸಾಹಿತ್ಯ ಜಾತ್ರೆ ಕುರಿತ ಸಿದ್ದಯ್ಯ ಹಿರೇಮಠರ ವರದಿ ಉಪಯುಕ್ತ ಮಾಹಿತಿ ನೀಡಿತು.

ರವೀಂದ್ರನಾಥ ಯಡಹಳ್ಳಿ, ಇಲಕಲ್ಲ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಸಹೋದರಿ ಬರೆದರೆ ಅಪರಾಧವೆ?

ಅಂಚೆ ಕಚೇರಿಯಲ್ಲಿ ರಂಗೋಲಿ ಹಾಕಿದ ರಾಜೇಶ್ವರಿ, ಸಾಥ್ ನೀಡಿದ ಮಮತಾ ಮತ್ತು ಲೇಖನ ಬರೆದ ನಾನು ಶ್ರೀಮತಿ– ನಮ್ಮ ಮೂವರಿಗೂ ಎಚ್.ಎಸ್. ಎಂದು ಇರುವ ಕಾರಣಕ್ಕೆ ನಾವೆಲ್ಲ ಸಹೋದರಿಯರಾಗಿರಬಹುದು ಎಂದು ಮೈಸೂರಿನ ಚಂದ್ರಶೇಖರ ಆರಾಧ್ಯ ಅವರಿಗೆ ಹೊಳೆದ ಅಂಶ ಈವರೆಗೂ ನನ್ನ ತಲೆಗೆ ಬಂದಿರಲಿಲ್ಲ. ನಾವು ಬೇರೆ ಬೇರೆ. ಒಂದು ಪಕ್ಷ ಸಹೋದರಿಯರಲ್ಲೇ ಅಪೂರ್ವ ಪ್ರತಿಭೆ ಇದ್ದು ಅದರ ಬಗ್ಗೆ ಲೇಖನ ಬರೆದರೆ ಅಪರಾಧವಾಗುತ್ತದೆಯೇ?

-ಎಸ್.ಎಸ್.ಶ್ರೀಮತಿ, ಬೆಂಗಳೂರು

### ಮಹಾಪರಾಧ ಅಲ್ಲ

ಅಬ್ದುಲ್ ಹಮೀದ್ ಅವರ 'ಇವರು ನಮ್ಮವರಲ್ಲ' ಕಥೆ ಎರಡು ಪತ್ರಿಕೆಗಳಲ್ಲಿ ಪ್ರಕಟವಾದರೆ ತಪ್ಪೇನಿದೆ? ಉದಾಹರಣೆಗೆ ಅನುಪಮಾ ಎಂದೊಂದು ಪತ್ರಿಕೆ ಇದೆ ಎಂಬುದೇ ನಮಗೆ ತಿಳಿದೇ ಇರಲಿಲ್ಲ. ಲೇಖಕರದ್ದು ಮಹಾಪರಾಧ ಖಂಡಿತಾ ಅಲ್ಲ.

-ರೇಷ್ಮಾ. ಎ.ಎಸ್., ಬಾಳೆಹೊನ್ನೂರು

### ಕುತೂಹಲಕಾರಿ, ಅಂತ್ಯ ನೀರಸ

ಭುವನಾ ಸುರೇಶ್ ಅವರ ಸಖೀ ಯಾರೇ ನಿನ್ನವನು! ಧಾರಾವಾಹಿ ಚೆನ್ನಾಗಿ ಮೂಡಿಬಂತು. ಆದರೆ ಅಂತ್ಯ ನೀರಸವಾಗಿತ್ತು. ಕಥೆಯ ಶೀರ್ಷಿಕೆಯಲ್ಲೇ ಲೇಖಕಿ ಪ್ರಶ್ನೆಯನ್ನಿಟ್ಟು ಅದಕ್ಕೆ ಕೊನೆಗೂ ಉತ್ತರಿಸದಿದ್ದುದು ನಿರಾಸೆಯನ್ನುಂಟು ಮಾಡಿತು. ಲೇಖಕಿ ಎತ್ತಿರುವ ಪ್ರಶ್ನೆಗೆ ಅವರೇ ಉತ್ತರಿಸಬೇಕಿತ್ತು.

-ಸಿ.ಜೆ. ಸುನೀತಾ, ಜೆ.ಎಂ. ಕುಮಾರಿ, ಹೊಸಪೇಟೆ/ ತರಂಗಿಣಿ, ತುಮಕೂರು/ ಎಚ್.ಆನಂದಕುಮಾರ್, ಚಿತ್ರದುರ್ಗ



### ವರ್ಷ ಕಾಯಲಿ, ಕಾಯುತ್ತಲೇ ಇರಲಿ...

'ಸಖೀ ಯಾರೇ ನಿನ್ನವನು' ಬರಬರುತ್ತ ಸಡಿಲವಾಯಿತು. ಸಂಗಾತಿಯ ಆಯ್ಕೆಗೆ ವರ್ಷ ಇನ್ನೊಂದು ಜನ್ಮದವರೆಗೆ ಕಾಯುವುದು ಉತ್ತಮ!

-ರಾಜಶೇಖರ, ಕುಕ್ಕೆಸುಬ್ರಹ್ಮಣ್ಯ

### ಎಳೆಯುವ ಅಗತ್ಯ ಇರಲಿಲ್ಲ

ಧಾರಾವಾಹಿ ವಾಸ್ತವಕ್ಕೆ ದೂರ ಎನಿಸಿದರೂ ಓದಲು ಹಿತವಾಗಿತ್ತು. ಆದರೆ ಅಂತ್ಯ ಮಾತ್ರ ಅನಿರೀಕ್ಷಿತ. ಇಂತಹ ಅಂತ್ಯಕ್ಕಾಗಿ ಧಾರಾವಾಹಿಯನ್ನು ಇಷ್ಟು ದೀರ್ಘ ಎಳೆಯುವ ಅಗತ್ಯವಿರಲಿಲ್ಲ.

-ಎಂ. ವೇದಾವತಿ, ಕೆ.ಆರ್. ಪೇಟೆ

### ಪ್ರತೀ ವಾರದ ಕುತೂಹಲ

ಪ್ರತಿ ಸಂಚಿಕೆಯನ್ನು ಕಾಯುವಂತೆ ಕುತೂಹಲದಿಂದ ಓದಿಸಿಕೊಂಡು ಹೋಯಿತು.

-ಡಿ.ವಿನುತಾ, ಪುತ್ತೂರು

### ಸದ್ಯ ಮುಗಿಯಿತಲ್ಲ!

ನವರಸಗಳನ್ನೂ ಬಲವಂತವಾಗಿ ತುರುಕಿದ ಕೆಟ್ಟ ಅಸಂಬದ್ಧ ಸಿನಿಮಾದಂತಿದ್ದು, ಈ ಸಖಿಯ ಸಖ ಯಾರೇ ಆಗಿರಲಿ– ಕಥೆಯಂತೂ ಸದ್ಯ ಮುಗಿಯಿತಲ್ಲಾ ಎಂದು ಹರ್ಷಪಡುವಂತಾಯಿತು.

-ಮೀರಾ ಮೋಹನ್, ಬೆಂಗಳೂರು

### ಹೆಚ್ಚು ಧಾರಾವಾಹಿ ಬರಲಿ

ಸುಧಾದಲ್ಲಿ ವಾರಕ್ಕೆ ಒಂದು ಧಾರಾವಾಹಿ ಸಾಲದು. ಮತ್ತಷ್ಟು ರೋಚಕ, ಪತ್ತೇದಾರಿ, ಐತಿಹಾಸಿಕ ಧಾರಾವಾಹಿಗಳೂ ಬರಲಿ ಎಂದು ನಿರೀಕ್ಷಿಸುತ್ತೇವೆ.

-ರಾಜಶೇಖರ ಗೌಡ, ಕೊಟ್ಟೂರು

